

ಹಂತದಲ್ಲಿ, ಅಂದರೆ, ಜೈವಿಕವಾಗಿ ಹೆಣ್ಣುಮಕ್ಕಳಿಗೆ ಜವಾಬ್ದಾರಿ ತುಸು ಹೆಚ್ಚಾಗಲೂಬಹುದು. ಗಂಡುಮಕ್ಕಳನ್ನು ಬೆಳೆಸುವಾಗಲೇ ಹೆತ್ತವರು, ಸಾಕಷ್ಟು ರಿಯಾಯಿತಿಗಳನ್ನು ನೀಡಿ ಮುಕ್ತವಾಗಿ ಬೆಳೆಸುವುದರಿಂದ ಅವರಿಗೆ ಸಾಮಾಜಿಕ ಅನುಕೂಲಗಳು ದೊರೆಯುತ್ತವೆ.

## ಸಹಬಾಳ್ವೆಗೆ ಮುಕ್ತ ಮನಸ್ಸೇ ಬುನಾದಿ

ಲಿವ್ ಇನ್ ರಿಲೇಷನ್‌ಶಿಪ್ ಆಗಿರಲಿ, ಮತ್ಯಾವುದೇ ಸಂಬಂಧವೇ ಆಗಿರಲಿ, ಎಲ್ಲಿಯವರೆಗೆ ಮನಸ್ಸುಗಳು ಸೌಹಾರ್ದವಾಗಿ ಯೋಚನೆ ಮಾಡುವ ಸಾಮರ್ಥ್ಯವನ್ನು ಉಳಿಸಿಕೊಂಡಿರುತ್ತವೋ ಅಲ್ಲಿಯವರೆಗೆ ಅವು ಸುಂದರವಾಗಿಯೇ ಸಾಗುತ್ತವೆ. ಸಮ್ಮತಿಯ ಸಹಬಾಳ್ವೆಯ ಅನೇಕ ಪ್ರಕರಣಗಳನ್ನು ಗಮನಿಸಿದಾಗ ಇದು ಸ್ಪಷ್ಟವಾಗುತ್ತದೆ. ಇಷ್ಟಕ್ಕೂ ಲಿವ್ ಇನ್ ರಿಲೇಷನ್‌ಶಿಪ್‌ನ ಉದ್ದೇಶವೇ ಜವಾಬ್ದಾರಿಯ ಹೇರಿಕೆಗಳು, ಜಂಜಾಟಗಳಿಂದ ಮುಕ್ತವಾಗಿ ಪರಸ್ಪರರನ್ನು ಗೌರವದಿಂದ ಕಾಣುತ್ತ ಮುಕ್ತವಾಗಿ ಬಾಳುವೆ ಮಾಡುವುದಾಗಿದೆ. ಸುಪ್ರೀತ್ ತನ್ನ ಸಂಗಾತಿಯನ್ನು ತೀವ್ರವಾಗಿ ಹಚ್ಚಿಕೊಂಡು, ಈಗ ಅಗಲಿಕೆಯನ್ನು ಸಹಿಸಲಾಗದೆ ಕುಸಿದುಹೋಗಿದ್ದರೂ ತಾನು ಈ ಸಂಬಂಧ ಆರಂಭಿಸುವಾಗ ಮಾಡಿಕೊಂಡಿದ್ದ ಒಪ್ಪಂದಕ್ಕೆ ಬದ್ಧನಾಗಿರುವುದಾಗಿ ಹೇಳುತ್ತಾನೆ. ಬಿಟ್ಟುಹೋದ ಆಕೆಯ ಸ್ವಾತಂತ್ರ್ಯವನ್ನು ಗೌರವಿಸುತ್ತಾನೆಯೇ ಹೊರತು, ನಿಂದಿಸುವುದಕ್ಕಾಗಲೀ, ಆಕೆಯ ಮೇಲೆ ಒತ್ತಡ ಹೇರುವುದಕ್ಕಾಗಲೀ ಅವನು ಮುಂದಾಗುತ್ತಿಲ್ಲ. ಬಹುಶಃ, ಲಿವ್ ಇನ್ ರಿಲೇಷನ್‌ಶಿಪ್‌ನಲ್ಲಿರುವ ಸಂಗಾತಿಗಳಿಬ್ಬರು



> ಲಿವ್ ಇನ್ ರಿಲೇಷನ್‌ಶಿಪ್‌ನಲ್ಲಿ ಇರುವವರು ತೊಂದರೆಗೊಳಗಾದಲ್ಲಿ ಸಲಹೆ ಸೂಚನೆಗಳನ್ನು ನೀಡಿ ಸಹಾಯ ಮಾಡುವ ಸಂದರ್ಭದಲ್ಲಿ ಅವರನ್ನು 'ಜಡ್ಜ್' ಮಾಡುವುದು ಸರಿಯಲ್ಲ. ವ್ಯಕ್ತಿಯ ಹಕ್ಕುಗಳನ್ನು ಗೌರವಿಸಿ ನಡೆಸುವ ಸಹಬಾಳ್ವೆಯನ್ನು ಪ್ರವೇಶಿಸುವ ಮುನ್ನ ಅವುಗಳ ಮಿತಿಗಳನ್ನೂ ಅವರು ತಿಳಿದಿರಬೇಕಷ್ಟೇ.
>
> -ಮರ್ಲಿನ್ ಮಾರ್ಟಿಸ್
>
> 'ಡೀಡ್ಸ್' ಸಂಸ್ಥೆಯ ನಿರ್ದೇಶಕಿ

ಬಯಸುವುದು ಇದೇ ಮುಕ್ತ ಮನಸ್ಸನ್ನು ಅನಿಸುತ್ತದೆ.

ಹಾಗೆಂದು ಎಲ್ಲ ಸಂದರ್ಭಗಳೂ ಹಗುರಾಗಿಯೂ ನವಿರಾಗಿಯೂ ಇರುವುದಿಲ್ಲವಲ್ಲ. ಸಂಗಾತಿ ಬೇಕೆನ್ನುವ ಬಯಕೆಯಿಂದ ಸಾಗರಿಕಾ ಕೂಡ ಲಿವ್ ಇನ್ ರಿಲೇಷನ್‌ಶಿಪ್‌ನೊಳಗೆ ಕಾಲಿಟ್ಟವಳೇ. ಅವಳು ಪದವಿ ಓದುತ್ತಿದ್ದರೆ, ರಿತೇಶ್ ಉದ್ಯೋಗಸ್ಥನಾಗಿದ್ದ. ಇಬ್ಬರೂ ತಮ್ಮ ತಮ್ಮ ವೈಯಕ್ತಿಕ ಸ್ಪೇಸ್ ಅನ್ನು ಗೌರವಿಸುತ್ತ ಸುಮಾರು ಆರು ತಿಂಗಳು ಬಾಳುವೆ ಮಾಡಿದ್ದರು. ಪ್ರತೀದಿನ ಕಾಲೇಜು ಮುಗಿದ ಬಳಿಕ ಸಂಜೆ ರಿತೇಶ್ ಜೊತೆಗೆ ಸುತ್ತಾಟ. ಫ್ಲಾಟೊಂದರಲ್ಲಿ ವಾಸ ಮಾಡುತ್ತ ಪ್ರಣಯದ ಪಕ್ಷಿಗಳ ಜೀವನ ಸುಂದರವಾಗಿ ಸಾಗುತ್ತಿತ್ತು. ಸಾಗರಿಕಾ ಸಂಪ್ರದಾಯಸ್ಥ ಕುಟುಂಬದಿಂದ ಬಂದವಳು. ಮೊದಲ ಪ್ರೀತಿಯನ್ನು ತುಸು ಅಂತರದಿಂದ ನಿಭಾಯಿಸುವುದು ಅವಳಿಗೆ ಸಾಧ್ಯವಾಗಲೇ ಇಲ್ಲ. ಪ್ರೀತಿಸಿದವನೊಂದಿಗೆ ಸಮರ್ಪಣಾ ಭಾವದಿಂದ ಬಾಳುವೆ ಮಾಡಬೇಕು ಎನ್ನುವ ಮನಸ್ಥಿತಿ ಅವಳಿಗೆ ಗೊತ್ತಿಲ್ಲದಂತೆಯೇ ರೂಪುಗೊಂಡಿತ್ತು. ಈ ಸೂಕ್ಷ್ಮವನ್ನು ರಿತೇಶ್ ಅರಿತಿದ್ದನೋ, ಅಥವಾ ಅವನೂ ಗಂಡು ಪ್ರತಿಷ್ಠೆಯನ್ನು ರೂಢಿಸಿಕೊಂಡು ಬೆಳೆದಿದ್ದನೋ ಗೊತ್ತಿಲ್ಲ. ತನ್ನ ಫ್ಲಾಟ್‌ನಲ್ಲಿ ತನ್ನ ದೈನಂದಿನ ಮನೆಕೆಲಸ ಮಾಡಲು ಸಾಗರಿಕಾ ಇದ್ದರೆ ಚೆನ್ನ ಎಂಬ ಭಾವನೆ ಅವನಲ್ಲಿ ಮೊಳೆಯಲಾರಂಭಿಸಿತು. 'ಸಾಕೀ, ನನ್ನ ಶರ್ಟ್ ಎಲ್ಲಿ... ಸಾಕೀ, ಇವತ್ತೂ ತಿಂಡಿ ಆರ್ಡರ್ ಮಾಡಬೇಕಾ? ಛೇ... ಸಾಕೀ, ಇವತ್ತೊಂದು ಕಾಲೇಜಿಗೆ ರಜೆ ಹಾಕು...' – ಹೀಗೆ ಆದೇಶಗಳು